KACM010010622021

Presented on : 04-05-2021
Registered on : 04-05-2021
Decided on : --
Duration :

**IN THE COURT OF**
**ADDL DISTRICT AND SESSIONS JUDGE CHIKMAGALUR**
**AT Chikmagalur,CHIKMAGALUR**
**(Presided Over by B PUSHPANJALI)**

**SC/87/2021**

**Exhibit No.**

Complainant(PROSECUTION):

State by Sakharayapatna Police, Rept. by The Public Prosecutor, Chikkamagaluru.

**VERSUS**

Accused:
Sathisha, S/o Late Timmaiah, 33 yrs, Agriculturist, R/o Machagondanahalli Village, Kadur Taluk, CKM
Age: 33
Occupation :
R/o Machagondanahalli Village, S.K. Patna Hobli, Kadur Taluk, CKM

---------------------------------------------------------------------------

APP for State Complainant}: Public Prosecutor,
Advocate for I.S. THEJASVI appearing for Sathisha, S/o Late Timmaiah, 33 yrs, Agriculturist, R/o Machagondanahalli Village, Kadur Taluk, CKM Advocate appearing for , respectively.

---------------------------------------------------------------------------

**Offence punishable under :**
**Sec.302, of INDIAN PENAL CODE,**

**1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಚಿಕ್ಕಮಗಳೂರು**

**<u>ಸತ್ರ ಮೊಕದ್ದಮೆ ಸಂಖ್ಯೆ: 87/2021</u>**

| | | | |
|---|---|---|---|
| **ಸಾಕ್ಷಿದಾರರ ಹೆಸರು** | : ಮಂಜುನಾಥ.ಸಿ.ಜೆ. | **ಪಿ.ಡಬ್ಲ್ಯೂ** | 11 |
| **ತಂದೆಯ ಹೆಸರು** | : ಜಗಧೀಶ್ | **ಸಿ.ಡಬ್ಲ್ಯೂ** | 14 |
| **ವಯಸ್ಸು** | : 35 ವರ್ಷ | | |
| **ಉದ್ಯೋಗ** | : ವ್ಯಾಪಾರ | | |
| **ವಾಸಸ್ಥಳ** | : ಸಖರಾಯಪಟ್ಟಣ, ಕಡೂರು ತಾಃ | | |

**ದಿಃ 24-03-2023 ರಂದು ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.**

**<u>ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದಃ-</u>**

1. **ಈಗ ತೋರಿಸಿದ ನಿಶಾನೆ ಪಿ.16 ಮತ್ತು ಪಿ.17 ದಾಖಲೆಗಳಲ್ಲಿ ನನ್ನ ರುಜು ಇರುತ್ತದೆ. ಸದರಿ ಸಹಿಯನ್ನು ನಿಶಾನೆ ಪಿ.16(ಬಿ) ಮತ್ತು ಪಿ.17(ಬಿ) ಎಂದು ಗುರುತಿಸಲಾಯಿತು. ದಿಃ 11-01-2021 ರಂದು ನಿಶಾನೆ ಪಿ.16 ಮತ್ತು ಪಿ.17 ಕ್ಕೆ ಸಖರಾಯಪಟ್ಟಣ ಪೊಲೀಸ್ ಠಾಣೆಯಲ್ಲಿ ಸಹಿ ಮಾಡಿರುತ್ತೇನೆ. ಆರೋಪಿಯು ತನ್ನ ತಂದೆಯನ್ನು ಕೊಲೆ ಮಾಡಿದ ಸಂಬಂಧ ಆರೋಪಿ ರಕ್ತಸಿಕ್ತ ಬಟ್ಟೆಯನ್ನು ಹಾಜರು ಪಡಿಸಿದಾಗ ಪೊಲೀಸರು ಬರೆದ ಮಹಜರಿಗೆ ಸಹಿ ಮಾಡಿರುತ್ತೇನೆ. ನಿಪಿ.17 ಕ್ಕೆ ಚಾಸಾ.13 ರವರು ಸಹಿ ಮಾಡಿರುತ್ತಾರೆ. ಈಗ ತೋರಿಸಿದ ನಿಶಾನೆ ಪಿ.18 ಮತ್ತು ಪಿ.19 ಫೋಟೋಗಳಲ್ಲಿ ನನ್ನ, ಆರೋಪಿಯ ಮತ್ತು ಚಾಸಾ.13 ರವರ ಇರುವಿಕೆ ಕಂಡು ಬರುತ್ತದೆ, ಸದರಿ ಫೋಟೋವನ್ನು ಮಹಜರಿನ ಸಮಯದಲ್ಲಿ ತೆಗೆದಿರುತ್ತಾರೆ. ಸದರಿ ಬಟ್ಟೆಗಳನ್ನು ನೋಡಿದರೆ ಗುರುತಿಸುತ್ತೇನೆ. ಸಾಕ್ಷಿಯು**

ಮು.ಮಾ.6 ಶರ್ಟನ್ನು ಮತ್ತು ಮು.ಮಾ.7 ಪ್ಯಾಂಟ್ ಈಗ ನ್ಯಾಯಾಲಯದ ಮುಂದೆ ನೋಡಿ ಗುರುತಿಸಿರುತ್ತಾರೆ. ಸಾಕ್ಷಿಯು ಮು.ಮಾ.6 ಮತ್ತು ಮು.ಮಾ.7 ಗಳ ಕವರುಗಳ ಮೇಲೆ ಅಂಟಿಸಿದ ಚೀಟಿಯ ಮೇಲೆ ತನ್ನ ಸಹಿಯನ್ನು ಗುರುತಿಸಿದ್ದರಿಂದ ಮು.ಮಾ.6(ಬಿ) ಮತ್ತು ಮು.ಮಾ.7(ಬಿ) ಎಂದು ಗುರುತಿಸಲಾಯಿತು. ಸದರಿ ಮಹಜರನ್ನು ರಾತ್ರಿ 8.15 ರಿಂದ 9.15 ರ ತನಕ ಬರೆದಿರುತ್ತಾರೆ.

<u>ಪಾಟೀ ಸವಾಲುಃ ಆರೋಪಿಯ ಪರವಾಗಿ ಶ್ರೀ ಐ.ಎಸ್.ಟಿ. ವಕೀಲರಿಂದಃ</u>

2. ಪೊಲೀಸ್ ಠಾಣೆಯಿಂದ 100 ಮೀಟರ್ ದೂರದಲ್ಲಿ ನನ್ನ ಹೋಟೆಲ್ ಇದೆ. ಆಗಾಗ ಪೊಲೀಸರು ನನ್ನ ಹೋಟೆಲ್ ಗೆ ಕಾಫಿ-ತಿಂಡಿಗೆ ಬರುತ್ತಾರೆ ಎಂದರೆ ಸರಿ. ಆ ಸಲುಗೆಯ ಮೇರೆಗೆ ಪೊಲೀಸರು ಆಗಾಗ ದಾಖಲೆಗಳಿಗೆ ನನ್ನ ಸಹಿ ಪಡೆದುಕೊಳ್ಳುತ್ತಾರೆ ಎಂದರೆ ಸರಿಯಲ್ಲ. ನಾನು ಹೋದಾಗ ಆರೋಪಿಯನ್ನು ಸೆಲ್ ಮುಂಭಾಗ ಕೂರಿಸಿದ್ದು, ಆತನ ಕೈಯಲ್ಲಿ ಬಟ್ಟೆಗಳನ್ನು ಸುತ್ತಿ ಇಟ್ಟುಕೊಂಡಿದ್ದನು. ರಕ್ತಸಿಕ್ತವಾದ ತಿಳಿ ಹಳದಿ ಬಣ್ಣದ ತುಂಬು ತೋಳಿನ ಶರ್ಟು, ಬೂದು ಕಲರಿನ ಪ್ಯಾಂಟು ಆರೋಪಿಯ ಕೈಯಲ್ಲಿತ್ತು. ಶರ್ಟಿನ ಮುಂಭಾಗದಲ್ಲಿ ರಕ್ತ ಹಾಗೂ ಶರ್ಟಿನ ಬಲ ತೋಳಿನ ಮೇಲೆ ಅಲ್ಲಲ್ಲಿ ರಕ್ತ ಇತ್ತು. ಬಲಗಾಲಿನ ಪ್ಯಾಂಟಿನ ಕೆಳಗೆ ಹಾಗೂ ಪ್ಯಾಂಟಿನ ತೊಡೆಯ ಭಾಗದ ಹತ್ತಿರ ರಕ್ತವಾಗಿತ್ತು. ಆರೋಪಿಯ ಕೈಯಲಲ್ಲಿದ್ದ ಬಟ್ಟೆಗಳನ್ನು ಯಾರ ಕೈಗೆ ಕೊಟ್ಟ ಎಂದರೆ ಪೊಲೀಸರ ಕೈಗೆ

ಕೊಟ್ಟ ಎಂದು ಹೇಳುತ್ತೇನೆ. ಮು.ಮಾ.6 ಶರ್ಟಿನ ಹಿಂಭಾಗ ಹಾಗೂ ಎಡ ತೋಳಿನ ಮೇಲೂ ರಕ್ತದ ಕಲೆ ಇದೆ ಎಂದರೆ ಸರಿ. ಮು.ಮಾ.7 ಪ್ಯಾಂಟಿನ ಎಡಕಾಲಿನ ಮೇಲು ಸಹ ಪೂರ್ಣ ಭಾಗದಲ್ಲೂ ರಕ್ತದ ಕಲೆ ಇದೆ ಎಂದರೆ ಸರಿ.

3. ನಾನು ನೋಡಿದ ಸಮಯದಲ್ಲಿ ಆರೋಪಿಯು ಟೀಶರ್ಟು ಮತ್ತು ಶಾರ್ಟ್ಸ್ ಹಾಕಿದ್ದ, ಆದರೆ ಬಟ್ಟೆಯ ಕಲರನ್ನು ಹೇಳಲು ಆಗುವುದಿಲ್ಲ. ನಾನು ರುಜು ಮಾಡಿದ ದಾಖಲೆಯಲ್ಲಿ ರಕ್ತಸಿಕ್ತ ಬಟ್ಟೆ ಅಂತ ಬರೆದಿದೆ, ಆದರೆ ಎಲ್ಲೆಲ್ಲಿ ರಕ್ತವಾಗಿದೆ ಅಂತ ಬರೆದಿಲ್ಲ. ಬಟ್ಟೆಗಳನ್ನು ಯಾರು ವಶಪಡಿಸಿಕೊಂಡರು ಎಂದು ಬರೆದಿದೆ ಎಂದರೆ ಠಾಣಾಧಿಕಾರಿಗಳು ಎಂದು ಬರೆದಿದೆ ಎಂದು ಹೇಳುತ್ತೇನೆ. ಆ ರೀತಿ ಠಾಣಾಧಿಕಾರಿಗಳು ಎಂದು ಬರೆಯದಿದ್ದ ದಾಖಲೆಗೆ ನೀವು ಸಹಿ ಮಾಡಿರುತ್ತೀರಾ ಎಂದರೆ ಇಲ್ಲ ಎಂದು ಹೇಳುತ್ತೇನೆ. ನಿಪಿ.17 ರಲ್ಲಿ ಠಾಣಾಧಿಕಾರಿಗಳ ವಶಕ್ಕೆ ಪಡೆದಿದೆ ಎಂದು ಬರೆದಿಲ್ಲ ಎಂದರೆ ಸರಿ. ಆರೋಪಿಯ ಕೈಯಲ್ಲಿ ಬಟ್ಟೆ ಇತ್ತು ಎಂಬುದನ್ನು ನಿಪಿ.17 ರಲ್ಲಿ ಪೊಲೀಸರು ಬರೆದಿರುತ್ತಾರಾ ಎಂದರೆ ಇಲ್ಲ ಎಂದು ಹೇಳುತ್ತೇನೆ.

4. ನೀವು ಠಾಣೆಗೆ ಹೋದಾಗ ಇದ್ದಂತಹ ಸನ್ನಿವೇಶದ ಫೋಟೋ ತೆಗೆದಿರುತ್ತಾರ ಎಂದರೆ ನಂತರದಲ್ಲಿ ಇಬ್ಬರು ಪೊಲೀಸರನ್ನು, ನನ್ನನ್ನು, ಆರೋಪಿ ಹಾಗೂ ಶಂಕರನನ್ನು ನಿಲ್ಲಿಸಿ ಫೋಟೋ ತೆಗೆದಿರುತ್ತಾರೆ ಎಂದು ಹೇಳುತ್ತೇನೆ ಇದನ್ನು ಹೊರತು ಪಡಿಸಿ ಬೇರೆ ಯಾವುದೇ ಫೋಟೋ ತೆಗೆದಿಲ್ಲ. ನಿಪಿ.18 ಮತ್ತು ಪಿ.19 ಫೋಟೋಗಳಲ್ಲಿ ಇಬ್ಬರು ಪೊಲೀಸರು

ಇಲ್ಲ ಎಂದರೆ ಸರಿ. ನಿಪಿ.18 ಮತ್ತು ಪಿ.19 ಫೋಟೋಗಳನ್ನು ನಂತರದಲ್ಲಿ ಕೇಸಿಗೆ ಬೇಕು ಎಂದು ತೆಗೆದಿರುತ್ತಾರೆ ಎಂದರೆ ಸರಿ. ಆ ನಂತರದಲ್ಲಿ ಫೋಟೋಗಳನ್ನು ತೆಗೆದ ನಂತರ ನಿಪಿ.17 ಕ್ಕೆ ಪೊಲೀಸರು ರುಜು ಮಾಡಿರುತ್ತೇನೆ ಎಂದರೆ ಸರಿಯಲ್ಲ.

5. ಪೊಲೀಸರು ನನ್ನ ಹೋಟೆಲ್ ನ ಗ್ರಾಹಕರಾದ ಕಾರಣ ಪೊಲೀಸರು ಹೇಳಿಕೊಟ್ಟಂತೆ ನಾನು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಾಕ್ಷಿ ಸ್ವತಃ ಹೇಳುತ್ತಾರೆ ಆರೋಪಿಯ ತಂದೆ ನನಗೆ ಪರಿಚಯ ಇದ್ದರು ಎಂದು. ಆರೋಪಿಯ ತಂದೆಯ ಹೆಸರು ನನಗೆ ಗೊತ್ತಿಲ್ಲ. ನಾನು ಹೇಳಿದಂತೆ ನನ್ನ ಸಮಕ್ಷಮ ಆರೋಪಿಯ ಕಡೆಯಿಂದ ಪೊಲೀಸರು ಯಾವುದೇ ಬಟ್ಟೆಗಳನ್ನು ವಶಪಡಿಸಿಕೊಂಡಿಲ್ಲ ಮತ್ತು ಮಹಜರ ಮಾಡಿಲ್ಲ ಎಂದರೆ ಸರಿಯಲ್ಲ.

<u>ಮರು ವಿಚಾರಣೆಃ</u> ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸ ಇ ಎ ಒ

ಸಹಿ/-

(ಬಿ.ಪುಷ್ಪಾಂಜಲಿ)

1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,

ಚಿಕ್ಕಮಗಳೂರು.

ರೂ.

Visit **ecourts.gov.in** for updates or download mobile app “**eCourts Services**” from Android or iOS